**<u>ಸಾಕ್ಷಿಗೆ ದಿನಾಂಕ 03.09.2025 ರಂದು ಪ್ರಮಾಣ ವಚನ ನೀಡಲಾಯಿತು.</u>**

**<u>ಪಾಟೀಸವಾಲುಃ ಪ್ರತಿವಾದಿ ಪರ ಶ್ರೀ ವಕೀಲರಿಂದಃ</u>**

ದಾವೆಯನ್ನು ಸಲ್ಲಿಸಲು ಹಾಗೂ ಮುಖ್ಯ ವಿಚಾರಣ ಪ್ರಮಾಣ ಪತ್ರವನ್ನು ಸಲ್ಲಿಸಲು ವಕೀಲರಿಗೆ ನಾನು ಮಾಹಿತಿ ನೀಡಿರುತ್ತೇನೆ. ನಿಪಿ-1 ಹಾಗೂ 2ರ ಪತ್ರಗಳನ್ನು ವಕೀಲರು ಬರೆದುಕೊಟ್ಟಿರುತ್ತಾರೆ. ಸದರಿ ದಾಖಲೆಯನ್ನು ಬರೆಯಲು ನಾನು ಮಾಹಿತಿ ನೀಡಿರುತ್ತೇನೆ. ಸದರಿ ಪತ್ರವನ್ನು ಬರೆಯುವಾಗ ನಾನು ನನ್ನ ಮಗ, ಮಹದೇವ ಹಾಗೂ ವಕೀಲರು ಹಾಜರಿದ್ದರು. ಛಾಪಕಾಗದವನ್ನು ನನ್ನ ಮಗ ಖರೀದಿಸಿರುತ್ತಾರೆ. ಪ್ರತಿವಾದಿಯವರು ನನ್ನ ಸಂಬಂಧಿಕರು. 1ನೇ ಪ್ರತಿವಾದಿ ಸಾಲ ಬೇಕು ಎಂದು ನನ್ನನ್ನು ಕೇಳಿರುತ್ತಾರೆ. ಪ್ರತಿವಾದಿ 1ರವರು ಮಾತ್ರ ಹಣ ಕೇಳಿರುತ್ತಾರೆ ಮತ್ತೆ ಯಾರು ಸಹ ಬಂದಿರಲಿಲ್ಲ. 1ನೇ ಪ್ರತಿವಾದಿ ನನ್ನ ಹತ್ತಿರ ಬಂದು ಹಣ ಕೇಳಿಲ್ಲ ಹಾಗೂ ಯಾವುದೇ ಹಣದ ವ್ಯವಹಾರ ನಡೆದಿಲ್ಲ ಎಂದರೆ ಸರಿಯಲ್ಲ. 1ನೇ ಪ್ರತಿವಾದಿ ತನ್ನ ಮಗಳ ಮದುವೆಗಾಗಿ 2 ಲಕ್ಷ ಹಣ 2020 ರಲ್ಲಿ ಸಾಲ ಕೇಳಿದ್ದರು. ನನಗೆ ನಿರ್ದಿಷ್ಟವಾಗಿ ದಿನಾಂಕ ವರ್ಷ ಗೊತ್ತಿಲ್ಲ. ನಾನು ವಡವೆಯನ್ನು ಅಡವಿಟ್ಟು 2 ಲಕ್ಷ ಸಾಲ 1ನೇ ಪ್ರತಿವಾದಿಗೆ ಕೊಟ್ಟಿರುತ್ತೇನೆ.

ವಡೆವೆಯನ್ನು ಗಿರಿವಿ ಇಟ್ಟ ಬಗ್ಗೆ ರಶೀದಿ ಇಲ್ಲ. ನಾನು ವಡವೆಯನ್ನು ಗಿರಿವಿ ಇಟ್ಟಿಲ್ಲ 2 ಲಕ್ಷ ಹಣ ಸಾಲ 1ನೇ ಪ್ರತಿವಾದಿಗೆ ಕೊಟ್ಟಿಲ್ಲ ನನಗೆ 2 ಲಕ್ಷ ಹಣ ಸಾಲ ಕೊಡುವ ಆರ್ಥಿಕ ಚೈತನ್ಯ ಇಲ್ಲ ಎಂದರೆ ಸರಿಯಲ್ಲ. 2 ಲಕ್ಷ ಹಣ ನನ್ನ ಬಳಿ ಇತ್ತು ಎಂದು ತೋರಿಸಲು ದಾಖಲೆಗಳು ಹಾಜರುಪಡಿಸಿಲ್ಲ. ನಾನು ವ್ಯವಸಾಯ ಮಾಡುತ್ತೇನೆ. ನನ್ನ ಹೆಸರಿನಲ್ಲಿ 2 ಎಕರೆ ಜಮೀನು ಇರುತ್ತದೆ ಆ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ. ಸದರಿ ಜಮೀನಿನಲ್ಲಿ ತೆಂಗು ಜೋಳ ಬೆಳೆಯುತ್ತೇವೆ. ವ್ಯವಸಾಯದಿಂದ ವಾರ್ಷಿಕ ಎಷ್ಟು ಹಣ ಬರುತ್ತದೆ ಎಂದು ಗೊತ್ತಿಲ್ಲ. ನಾನು ನನ್ನ ಮಕ್ಕಳೊಂದಿಗೆ ವಾಸವಿದ್ದೇನೆ. ನನ್ನ ಮಕ್ಕಳಿಗೆ ಸಾಲ ನೀಡಿರುವ ವಿಚಾರ ಗೊತ್ತಿರುತ್ತದೆ. ನನ್ನ ಮಗ ಕನಕರಾಜು ನಿಪಿ-1 ಮತ್ತು 2ಕ್ಕೆ ಸಾಕ್ಷಿದಾರರಾಗಿ ಸಹಿ ಮಾಡಿರುತ್ತಾರೆ ಎಂದರೆ ಸರಿ.

1 ನೇ ಪ್ರತಿವಾದಿಗೆ 2 ಲಕ್ಷ ಸಾಲವನ್ನು ವಕೀಲರ ಕಛೇರಿಯಲ್ಲಿ ನೀಡಿರುತ್ತೇನೆ. 1 ನೇ ಪ್ರತಿವಾದಿಗೆ ಸಾಲ ನೀಡುವ ಉದ್ದೇಶದಿಂದ ಸದರಿ ದಿನ ನಾನು ಹುಣುಸೂರಿಗೆ ಬಂದಿರುತ್ತೇನೆ. ನನ್ನ ಮಗ ನಿಪಿ-1 ಮತ್ತು 2 ದಾಖಲೆಯನ್ನು ತಯಾರು ಮಾಡಿದ್ದರು. 2 ಲಕ್ಷ ಹಣವನ್ನು ನಗದು ರೂಪದಲ್ಲಿ ನೀಡಿರುತ್ತೇನೆ. 500 ರೂ. ಹಾಗೂ 1,000 ರೂ ಮುಖ ಬಲೆಯ ನೋಟುಗಳನ್ನು 1 ನೇ ಪ್ರತಿವಾದಿಗೆ ನೀಡಿರುತ್ತೇನೆ ಎಷ್ಟು ನೋಟು ಕೊಟ್ಟಿರುತ್ತೇನೆ ನೆನಪಿಲ್ಲ. ನನಗೆ ಲಕ್ಷಾಂತರ ರೂ. ಹಣವನ್ನು ಎಣಿಸಲು ಬರುವುದಿಲ್ಲ. ನಿಪಿ-1 ಮತ್ತು 2 ಕ್ಕೆ ಮೊದಲು ನಾನು ಸಹಿ ಮಾಡಿರುತ್ತೇನೆ. ನಿಪಿ-1 ಮತುತ 2 ನ್ನು ಯಾವ ದಿನಾಂಕದಂದು ಬರೆಯಲಾಗಿದೆ ಹಾಗೂ ಯಾವ ಸಮಯದಲ್ಲಿ ಬರೆಯಲಾಗಿದೆ ಗೊತ್ತಿಲ್ಲ. ನಿಪಿ-1 ಮತ್ತು 2 ರ ಸಾಕ್ಷಿದಾರ ಮಹದೇವ ನನ್ನ ಸಂಬಂಧಿಕರು ಎಂದರೆ ಸರಿ. ಸಾಕ್ಷಿದಾರರನ್ನು ನಾವು ಕರೆದುಕೊಂಡು ಹೋಗಿದ್ದೇವು ಎಂದರೆ ಸರಿ. ನಿಪಿ-1 ಮತ್ತು 2 ನ್ನು ಬರೆಯುವ ಸಮಯದಲ್ಲಿ 2 ರಿಂದ 4 ನೇ ಪ್ರತಿವಾದಿಯವರು ಸಹ ಹಾಜರಿದ್ದರು ಸಹಿ ಹಾಕಿರುತ್ತಾರೆ. 2 ನೇ ರಿಂದ 4 ನೇ ಪ್ರತಿವಾದಿಯವ ಹೆಸರು ನನಗೆ ಗೊತ್ತಿಲ್ಲ ನನ್ನ ಮಗನಿಗೆ ಗೊತ್ತಿರುತ್ತದೆ. 2 ರಿಂದ 4 ನೇ ಪ್ರತಿವಾದಿಯವರ ಹೆಸರನ್ನು ನನ್ನ ಮಗ ಹೇಳಿ ಬರೆಸಿರುತ್ತಾರೆ. ಪ್ರತಿವಾದಿಯವರು ನಿಪಿ-1 ಮತ್ತು 2 ರ ದಾಖಲೆಯನ್ನು ಸಾಲದ ಹಣ 2 ಲಕ್ಷಕ್ಕೆ ಬರೆದುಕೊಟ್ಟಿಲ್ಲ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-1 ಮತ್ತು 2 ಪತ್ರಗಳನ್ನು ದಿನೇಶ ವಕೀಲರು ತಯಾರು ಮಾಡಿರುತ್ತಾರೆ. ಸದರಿರವರ ಸಾಕ್ಷ್ಯ ವಿಚಾರಣಾ ಮಾಡಲು ಯಾವುದೇ ತೊಂದರೆ ಇಲ್ಲ. ಪ್ರತಿವಾದಿಯವರು ಸುಮಾರು 25 ವರ್ಷಗಳಿಂದೆಯೇ ಹುಣಸೂರಿನಲ್ಲಿ ವಾಸವಿದ್ದಾರೆ ಎಂದರೆ ಸರಿ. ಪ್ರತಿವಾದಿಯವರಿಗೆ ಊರಿನಲ್ಲಿ ಜಮೀನು ಖಾಲಿ ನಿವೇಶನ ಇದೆ ಎಂದರೆ ಸರಿ. ಪ್ರತಿವಾದಿಯವರು ತಮಗೆ ಸೇರಿದ ಖಾಲಿ ನಿವೇಶನವನ್ನು ನಮಗೆ ಕೊಡುತ್ತೇವೆ ಎಂದು ಒಪ್ಪಿಕೊಂಡಿದ್ದರು ಎಂದರೆ ಸರಿ. ಸದರಿ ಖಾಲಿ ನಿವೇಶನವನ್ನು ನಿಮಗೆ ಕೊಡುತ್ತೇವೆ ತುರ್ತಾಗಿ ಹೆಚ್ಚಿನ ಹಣವನ್ನು ಕೊಡಿ ಎಂದು ಕೇಳಿದರು ಎಂದರೆ ಸರಿಯಲ್ಲ. ನಾವು ಪ್ರತಿವಾದಿಯವರಿಗೆ ಹಣ ಕೊಡುವುದಿಲ್ಲ ಬೇರೆಯವರಿಗೆ ಮಾರಾಟ ಮಾಡಿ ಎಂದು ಹೇಳಿ ಕಳುಹಿಸಿದೇವು ಎಂದರೆ ಸರಿಯಲ್ಲ. ಸದರಿ ನಿವೇಶನವನ್ನು ಬೇರೆಯವರೆಗೆ ಮಾರಾಟ ಮಾಡುತ್ತಾರೆ ಎಂಬ

ದುರುದ್ದೇಶದಿಂದ ನಿಪಿ-1 ಮತ್ತು 2 ರ ಪತ್ರವನ್ನು ಸೃಷ್ಟಿಸಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ.

ದಾವೆಯನ್ನು ಸಲ್ಲಿಸುವ ಪೂರ್ವದಲ್ಲಿ ಪ್ರತಿವಾದಿಯವರಿಗೆ ಖಾಲಿ ನಿವೇಶವನ್ನು ಬರೆದುಕೊಡು ಎಂದು ಪಿಡಿಸಿದೆವು ಎಂದರೆ ಸರಿಯಲ್ಲ ಸಾಕ್ಷಿ ಸಾಲದ ಹಣ ವಾಪಸ ಕೊಡಿ ಎಂದು ಕೇಳಿದೇವು ಎಂದು ನುಡಿಯುತ್ತಾರೆ. ಪ್ರತಿವಾದಿಯವರು ನನ್ನಿಂದ 2 ಲಕ್ಷ ಹಣ ಸಾಲ ಪಡೆದಿಲ್ಲ ನಿಪಿ-1 ಮತ್ತು 2 ನ್ನು ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ. ನಿಪಿ-1 ಮತ್ತು 2 ರಲ್ಲಿರುವ ಸಹಿಗಳನ್ನು ರಾಸಾಯನಿಕ ಪರೀಕ್ಷೆಗೆ ಕಳುಹಿಸಲು ಯಾವುದೇ ತೊಂದರೆ ಇಲ್ಲ. ನಿಪಿ-1 ಮತ್ತು 2 ಕ್ಕೂ ಪ್ರತಿವಾದಿಯವರಿಗೆ ಯಾವುದೇ ಸಂಬಂಧ ಇಲ್ಲ ಪ್ರತಿವಾದಿಯವರ ಸಹಿಯನ್ನು ನಾವು ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇರುವುದಿಲ್ಲ.**

**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.**

**ಓ.ಹೇ.ಕೇ.ಸರಿ ಇದೆ.**

**ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.**
**ನ್ಯಾಯಾಧೀಶರು, ಹುಣಸೂರು.**